## ಘನತೆಯ 'ಸುಧಾ'

'ಸುಧಾ' ಪತ್ರಿಕೆಯನ್ನು ನಾನು ಬಾಲ್ಯದಿಂದಲೂ ಓದುತ್ತಿದ್ದೆ. ಆದರೆ ಈ ಪತ್ರಿಕೆಯ ಮಹತ್ವ ನನಗೆ ಚೆನ್ನಾಗಿ ಗೊತ್ತಾಗಿದ್ದು, ನಾನು ಉಡುಪಿಯ ನಂದಳಿಕೆ ಎಂಬಲ್ಲಿ ಕವಿ ಮುದ್ದಣನಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಿದ್ದಾಗ. 1980ರ ಆಸುಪಾಸಿನಲ್ಲಿ ಜಿ.ಕೆ. ಐತಾಳ್ ಎಂಬ ಲೇಖಕರು, 'ಮುದ್ದಣ ಸ್ಮಾರಕಕ್ಕೆ ಮುಕ್ತಿ ಎಂದು' ಎಂಬ ಲೇಖನವನ್ನು 'ಸುಧಾ' ಪತ್ರಿಕೆಗೆ ಬರೆದರು. ಆಗ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿದ್ದ ಎಂ.ಬಿ. ಸಿಂಗ್ ಅವರು ಈ ಲೇಖನ ಪ್ರಕಟಿಸಿದ್ದು, ಅದಕ್ಕೆ ರಾಜ್ಯದ ವಿವಿಧೆಡೆಗಳಿಂದ ಉತ್ತಮ ಪ್ರತಿಕ್ರಿಯೆ ಬಂತು. ಆ ಸಂದರ್ಭದಲ್ಲಿ ಲೇಖಕ ಎಲ್.ಎಸ್. ಶೇಷಗಿರಿ ರಾಯರು, ಮುಖ್ಯಮಂತ್ರಿಯಾಗಿದ್ದ ಗುಂಡೂರಾಯರ ಪರ್ಸನಲ್ ಸೆಕ್ರೆಟರಿ ಆಗಿ ಕೆಲಸ ಮಾಡುತ್ತಿದ್ದು, ಇದೇ ಲೇಖನವನ್ನು ಗುಂಡೂರಾಯರ ಗಮನಕ್ಕೆ ತಂದಿದ್ದರು. ಈ ಲೇಖನವನ್ನು ಓದಿದ ಕೋಟ ಶಿವರಾಮ ಕಾರಂತರು, ಉಡುಪಿಯವರೇ ಆಗಿದ್ದ ವಿ.ಎಸ್. ಆಚಾರ್ಯ ಮುಂತಾದವರು, ಮುದ್ದಣನನ್ನು ಸ್ಮರಿಸುವ ನಿಟ್ಟಿನಲ್ಲಿ ಸ್ಮಾರಕ ಭವನ ಕಟ್ಟಿಸಬೇಕು ಎಂದು ಸರ್ಕಾರವನ್ನು ವಿವಿಧ ಸಂದರ್ಭಗಳಲ್ಲಿ ಆಗ್ರಹಿಸಿದರು. ಈ ಎಲ್ಲ ಆಗ್ರಹಗಳ ಪರಿಣಾಮವಾಗಿ 1987 ಮೇ 16ರಂದು ಮುದ್ದಣ ಸ್ಮಾರಕ ಭವನ ನಂದಳಿಕೆಯಲ್ಲಿ ಉದ್ಘಾಟನೆಯಾಯಿತು.

'ಸುಧಾ' ಪತ್ರಿಕೆಗೆ ಸಂಬಂಧಿಸಿದ ಇನ್ನೂ ಒಂದು ಸುಂದರ ನೆನಪು ನನ್ನಲ್ಲಿದೆ. ನಂದಳಿಕೆಯಲ್ಲಿ ಯುವಕ ಸಂಘವು ನಡೆಸುತ್ತಿದ್ದ ಸಾಮಾಜಿಕ ಕಾರ್ಯಗಳನ್ನು ಗಮನಿಸಿ, ಸುಧಾ ಜೆ. ಭಟ್ ಎಂಬುವವರು 'ಒಂದು ಊರು ಒಂದು ಯುವಕ ಸಂಘ' ಎಂಬ ಲೇಖನವನ್ನು 'ಸುಧಾ' ಪತ್ರಿಕೆಯಲ್ಲಿ ಬರೆದರು. ಅದನ್ನು ಓದಿದ ಮೈಸೂರಿನ ಒಬ್ಬರು ಓದುಗರು 'ಒಂದು ಊರಿನಲ್ಲಿ ಯುವಕರು ಹೇಗಿರಬೇಕು ಎಂಬುದಕ್ಕೆ ಮಾದರಿ ನಿಮ್ಮ ಯುವಕ ಸಂಘ. ಅದಕ್ಕೆ ಕಿಂಚಿತ್ ಕಾಣಿಕೆ ಸ್ವೀಕರಿಸಿ' ಎಂದು ಪತ್ರ ಬರೆದು, 100 ರೂಪಾಯಿಗಳ ಚೆಕ್ ಲಗತ್ತಿಸಿದ್ದರು. ಸಹಿಯ ಕೆಳಗೆ 'ಸ್ವಾತಂತ್ರ್ಯ ಹೋರಾಟಗಾರ ಎಲ್. ನರಸಿಂಹಯ್ಯ ಎಂಬ ಉಲ್ಲೇಖವಿತ್ತು.

ರಾಜ್ಯದಲ್ಲಿಯೇ ತನ್ನ ಘನತೆಯನ್ನು ಕಾಪಾಡಿಕೊಂಡಿರುವ 'ಸುಧಾ' ಪತ್ರಿಕೆಯ ಹೆಮ್ಮೆಯ ಓದುಗ ನಾನು. ಪತ್ರಿಕೆ ಓದಲು ಪ್ರತಿ ಗುರುವಾರಕ್ಕಾಗಿ ಕಾಯುತ್ತೇನೆ. ಪತ್ರಿಕೆಗೆ ಉಜ್ವಲ ಭವಿಷ್ಯ ದೊರೆಯಲಿ ಎಂಬ ಹಾರೈಕೆಗಳು.

—ನಂದಳಿಕೆ ಬಾಲಚಂದ್ರ ರಾವ್, ಉಡುಪಿ

## 'ಸುಧಾ' ಜೊತೆಗಿನ ಓದುಗರ ಒಡನಾಟ




### ಮುಕ್ತ ವೇದಿಕೆ

'ಸುಧಾ' ನನ್ನ ಬಾಲ್ಯದ ದಿನಗಳಿಂದಲೂ ಜೊತೆಗಿರುವ ಪತ್ರಿಕೆ. ನಮ್ಮ ಮನೆಗೆ ಹಲವು ವರ್ಷಗಳಿಂದಲೂ 'ಸುಧಾ' ತರಿಸುತ್ತಿದ್ದರು. ಈಗಲೂ ನಾನು ಪ್ರೀತಿಯ ಓದುಗ.

'ಸುಧಾ'ದಲ್ಲಿ ಬರುವ ವೈಜ್ಞಾನಿಕ, ವೈಚಾರಿಕ, ಐತಿಹಾಸಿಕ, ಪ್ರವಾಸಕ್ಕೆ ಸಂಬಂಧಿಸಿದಂತಹ ಲೇಖನಗಳನ್ನು ಓದುವುದೆಂದರೆ ನನಗೆ ಬಹಳ ಇಷ್ಟ. 'ಜಾಣರ ಪೆಟ್ಟಿಗೆ' ವಿಭಾಗದಲ್ಲಿ ಟಿ.ಎನ್. ಸೀತಾರಾಮ್ ಅವರ ಧಾರಾವಾಹಿ ಕುರಿತು ನನ್ನ ಅನಿಸಿಕೆ ಪ್ರಕಟವಾಗಿದ್ದನ್ನು ಕಂಡು ನಾನು ಸಂಭ್ರಮಿಸಿದ್ದೆ. ಪತ್ರಿಕೆ ಓದುಗರ, ಬರಹಗಾರರ ಮುಕ್ತ ವೇದಿಕೆಯಾಗಿದೆ. 'ಸುಧಾ' ಎಂದರೆ ನಮ್ಮೆಲ್ಲರಿಗೂ ಹೆಮ್ಮೆಯೇ.

—ಶಶಾಂಕ್ ಎನ್., ಉದ್ದಾ ದೇವರ ಮಠ

### ಪ್ರತಿ ವಾರದ ಆನಂದ

'ಸುಧಾ' ಪುಟಗಳನ್ನು ತಿರುವುತ್ತಿದ್ದರೆ ಒಂದು ಜಗತ್ತು ತೆರೆದುಕೊಳ್ಳುತ್ತಿರುವಂತೆ ಕಾಣುತ್ತದೆ. ಹೊಸದಾದ ಸಂಗತಿಗಳ ಕುತೂಹಲಕಾರಿ ಲೇಖನಗಳು ಖುಷಿ ನೀಡುತ್ತವೆ. 'ಸುಧಾ' ಎಂದರೆ, ಪ್ರತಿ ವಾರ ಹೊಸ ಆನಂದ. ಓದುಗರಿಗೆ ದಾರಿದೀಪ.

ಸುದ್ದಿಗಳು, ಪ್ರವಾಸ, ಕಥೆ, ಧಾರಾವಾಹಿಗಳು ಭವ್ಯವಾಗಿರುತ್ತವೆ. ಕುಳಿತಲ್ಲೇ ದೂರದ ದೇಶಕ್ಕೆ ಕರೆದೊಯ್ಯುವಂಥ ಪ್ರವಾಸ ಲೇಖನಗಳಂತೂ ಬಹಳ ಹಿಡಿಸುತ್ತವೆ. ಹೃದಯ ಮಿಡಿಯುವ ಲೇಖನಗಳನ್ನು ಹೊತ್ತು ತರುವ 'ಸುಧಾ'ಗೆ ತುಂಬು ಧನ್ಯವಾದ.

—ಎಸ್.ಎನ್. ಮೂರ್ತಿ

### ಉತ್ಸಾಹ ತುಂಬುವ ಪತ್ರಿಕೆ

'ಸುಧಾ' ನನ್ನ ಪ್ರೀತಿಪಾತ್ರ ಪತ್ರಿಕೆ. 2012ರಿಂದ ನನ್ನ–'ಸುಧಾ' ಒಡನಾಟ. ಈಗಲೂ ಗುರುವಾರವನ್ನು ಎದುರು ನೋಡುತ್ತಿರುತ್ತೇನೆ. ನಮ್ಮಂಥ ಒಬ್ಬಂಟಿಗರಿಗೆ, ವಯಸ್ಸಾದವರಿಗೆ ಉತ್ಸಾಹ ತುಂಬುವ ಪತ್ರಿಕೆ. 'ಸುಧಾ'ದಲ್ಲಿ ಪ್ರಕಟಗೊಂಡಿರುವ ಕೆಲವು ಧಾರಾವಾಹಿಗಳನ್ನು ಸಂಗ್ರಹಿಸಿ ಇಟ್ಟಿದ್ದೇನೆ. ನೀವು ಕೇಳಿದಿರಿ, ಜಾಣರ ಪೆಟ್ಟಿಗೆ ವಿಮರ್ಶೆಗಳು ಮತ್ತು ಎಳೆಯರ ಅಂಗಳವನ್ನು 'ಸುಧಾ' ಬಂದ ತಕ್ಷಣ ನೋಡುತ್ತೇನೆ. 'ನೀವು ಕೇಳಿದಿರಿ'ಯಲ್ಲಿ ರಾಮ್ ಅವರ ವಾಕ್‌ಚಾತುರ್ಯ, ಉತ್ತರಕ್ಕೆ ನನ್ನ ವಂದನೆ. 'ಸುಧೆ' ನಿರಂತರವಾಗಿ ಹರಿಯಲಿ ಎಂದು ಹಾರೈಸುವ,

—ರಮಾ ಶ್ರೀನಿವಾಸ್ ರಾವ್, ತುಮಕೂರು

### ವೈವಿಧ್ಯಮಯ ಭಂಡಾರ

ನನಗೂ, 'ಸುಧಾ' ಇಬ್ಬರಿಗೂ ಒಂದೇ ವಯಸ್ಸು. ಅಬ್ಬಬ್ಬಾ ಅಂದ್ರೆ, ನನಗಿಂತಲೂ ಒಂದು ವರ್ಷ ದೊಡ್ಡವಳಿರಬಹುದು 'ಸುಧಾ'.

60ರ ಗಡಿ ತಲುಪುತ್ತಿದ್ದಂತೆ, ಹಿರಿಯ ನಾಗರಿಕ ಎನ್ನುವ ಪಟ್ಟ, ಹಣೆಪಟ್ಟಿ ಎರಡನ್ನೂ ಪಡೆಯುವುದರ ಜೊತೆಯಲ್ಲಿ, ಸಾಮಾಜಿಕವಾಗಿ ನನಗಿಂತಲೂ ಕಿರಿಯರ ಸಾಂಗತ್ಯ ಹಾಗೂ ಸಂಬಂಧಗಳಿಂದ ನಾನು ವಂಚಿತನಾದರೆ, ನಿತ್ಯ ನೂತನವಾಗಿ ಅಬಾಲವೃದ್ಧರಾದಿಯಾಗಿ ಎಲ್ಲರ ನಡುವೆಯೂ ನಿತ್ಯವೂ ಕಂಗೊಳಿಸತೊಡಗಿದ್ದು 'ಸುಧಾ'ಳ ವೈಶಿಷ್ಟ್ಯ.

ಸ್ಪರ್ಧಾತ್ಮಕ ಯುಗದ ಮಾರುಕಟ್ಟೆಯಲ್ಲಿ, ಇಂದಿನವರೆಗೂ ವಿಶಿಷ್ಟ ಲೇಖನಗಳು, ಮನರಂಜನೆ ಸುದ್ದಿಗಳು, ಜ್ಞಾನ ಹೆಚ್ಚಿಸುವ ಅಂಕಣಗಳು, ಧಾರಾವಾಹಿಗಳು, ಚಿಣ್ಣರ ಮನಸ್ಸಿಗೆ ಹಿಡಿಸುವ ಕಲಮ್ಮುಗಳು, ಕಲೆ, ಸಾಹಿತ್ಯ, ನಾಟಕ, ಸಿನಿಮಾ ಹೀಗೆ ಒಂದಲ್ಲ ಎರಡಲ್ಲಾ, ಹತ್ತು ಹಲವಾರು ವೈವಿಧ್ಯಮಯ ಹೊತ್ತಿಗೆಯ ಭಂಡಾರವೇ ಆಗಿ ಪ್ರತಿ ವಾರವೂ ಹೊರಹೊಮ್ಮುತ್ತಿರುವ 'ಸುಧಾ' ನನಗೊಬ್ಬನಿಗೇ ಅಲ್ಲ, ನಮ್ಮ ಮನೆಯ ಎಲ್ಲರಿಗೂ ಅಚ್ಚುಮೆಚ್ಚು.

'ಸುಧಾ' ಹೀಗೆಯೇ ನಿತ್ಯ ನಿರಂತರವಾಗಿ ಹಚ್ಚ ಹಸುರಿನ ಸಿರಿಯ ಧ್ವನಿಯಾಗಿ ಮುಂದುವರಿದು ಕಂಗೊಳಿಸಲಿ ಎಂದು ಹಾರೈಸುತ್ತೇನೆ.

—ವಿ.ಆರ್. ಮುರಲೀಧರ್, ಬೆಂಗಳೂರು